॥ ಶ್ರದ್ಧಾ ಹಿ ಪರಮಾ ಗತಿಃ ॥

# ಚಳುವಳಿಗಳು ಮತ್ತು ಹೊಸಗನ್ನಡ ಸಾಹಿತ್ಯ

## ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ
## ಮಂಡಿತವಾದ ಲೇಖನಗಳ ಸಂಕಲನ





ಡಾ. ಕೆ. ಪಿ. ನಾರಾಯಣಪ್ಪ
ಸಂಪಾದಕರು

ಡಾ. ಬಿ. ಆರ್. ಪರಿಣೀತಾ
ಪ್ರಧಾನ ಸಂಪಾದಕರು


## ಕನ್ನಡ ವಿಭಾಗ


# ನ್ಯಾಷನಲ್ ಕಾಲೇಜು (ಸ್ವಾಯತ್ತ)

ನ್ಯಾಕ್ 'ಎ' ಶ್ರೇಣಿ ಮಾನ್ಯತೆ ಪಡೆದಿದೆ

ಜಯನಗರ, ಬೆಂಗಳೂರು – 560 070

Proceedings of the One Day National Level Seminar on " **Chaluvaligalu Mattu Hosagannada Sahithya**" organized by **National College (Autonomous)**, Jayanagar, Bengaluru - 560 070.

**Year of Publication : 1st Edition 2018**

**Volume : 1**

**Copyright © [2018] [National College, Jayanagar, Bengaluru-70] All Rights Reserved.**

No Part of this book may be reproduced or transmitted in any form or by any means, electronic or mechanical, including photocopying, recording or by any information storage and retrieval system without permission in writing from the publisher.

Size : A4
Paper : 75 GSM
Binding : Paper Back
No. of Pages : 400
No. of Copies : 150
ISBN : 978-81-933447-7-4
Price : Rs. 525/-

**Published by:**
The Principal
National College
Jayanagar, Bengaluru - 560 070.

**Chief - Editor**
Dr. B. R. Parineetha

**Editor**
Dr. K. P. Narayanappa

**Co-Editiors**
Dr. B. Papanna
Prof. V. Savitha
Prof. R. Ravikumara

**Printed at:**
Sneha Printers
Bangalore

**Disclaimer**

Although every precaution has been taken in the preparation of this book, the publisher and author assume no responsibility for errors or omissions. Nor is any liability assumed for damage resulting from the use of the information contained herein.

51. ಆಧುನಿಕೋತ್ತರ ಕಾಲಘಟ್ಟದ ದಲಿತ ಚಳವಳಿಯ ಮೇಲೆ ದಲಿತ ಸಾಹಿತ್ಯದ ಪ್ರಭಾವ
ಸತೀಶ ಬಿ.ಎಂ 184

52. ಶರಣರ ದೃಷ್ಟಿಯಲ್ಲಿ ಕಾಯಕ ತತ್ವ
ಡಾ. ನಾಗವರ್ಮ ಜಿ. ಎಚ್. 187

53. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಚರಣರಾಜ ಜಿ ಹೆಚ್. 191

54. ದಲಿತ ಚಳವಳಿಗೆ ಕನ್ನಡ-ತೆಲುಗು ದಲಿತ ಕಾವ್ಯಗಳ ಪ್ರೇರಣೆ
ಮಂಜುನಾಥ ಜಿ . 195

55. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಅನಿತಾ.ಪಿ 200

56. ಕನ್ನಡ ಸಾಹಿತ್ಯದ ಮೇಲೆ ದಲಿತ ಚಳವಳಿಯ ಪ್ರಭಾವ
ಪ್ರೊ, ಎಂ. ಸುಮಿತ್ರ 202

57. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಡಾ. ಬಿ. ರಾಜಣ್ಣ 205

58. ಮರಾಠಿ ಮತ್ತು ಕನ್ನಡ ದಲಿತ ಆತ್ಮಕಥೆಗಳ ಮೇಲೆ ದಲಿತ ಚಳುವಳಿಯ ಪ್ರಭಾವ
ಡಾ.ಹೊಂಬಯ್ಯ ಹೊನ್ನಲಗೆರೆ 209

59. ದಲಿತ ಚಳವಳಿಗೊಂದು ಕೇತನ : ಮಹಾಮಸ್ತಕಾಭಿಷೇಕ ನಾಟಕ
ರಾಕೇಶ್‌ಶರ್ಮ ಕೆ.ವಿ 213

60. ಬಂಡಾಯ ಸಾಹಿತ್ಯ ಮತ್ತು ಚಳವಳಿ
ಲೋಕೇಶ .ಕೆ .ಪಿ 216

61. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಪ್ರೊ, ಪ್ರಮೀಳ 220

62. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಡಾ॥ ಬಿ. ಪಾಪಣ್ಣ 224

63. ದಲಿತ ಮತ್ತು ಬಂಡಾಯ ಸಮಕಾಲೀನ ಸವಾಲುಗಳು
ಡಾ. ಪಿ. ನಾಗರಾಜ 231

64. ದಲಿತ ಚಳವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಲೋಕೇಶ್ ಬಿ 234

65. ಸಾಹಿತ್ಯದ ಮೇಲೆ ದಲಿತ ಚಳುವಳಿಯ ಪ್ರಭಾವ
ಡಾ. ಸಣ್ಣವೀರಣ್ಣ.ಎಚ್ .ದೊಡ್ಡಮನಿ. 237

66. ಸಾಹಿತ್ಯದ ಮೇಲೆ ದಲಿತ ಚಳುವಳಿಗಳ ಪ್ರಭಾವ
ಕುಮಾರ ಎನ್. 241

67. ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ
ಪ್ರೊ, ಸದ್ದಾಮಹುಸೇನ್.ಇಸ್ಹಾಕ.ಮುಜಾವರ 244

68. ಹೊಸಗನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ
ಪ್ರೊ, ರಾಜಶೇಖರ ಬಿರಾದಾರ ಬೋನ್ಹಾಳ 248

# ದಲಿತ ಚಳುವಳಿಗೆ ದಲಿತ ಸಾಹಿತ್ಯದ ಪ್ರೇರಣೆ

ಡಾ॥ ಬಿ. ಪಾಪಣ್ಣ *

ಶತ ಶತಮಾನಗಳಿಂದ ಅಕ್ಷರದಿಂದ ವಂಚಿಸಲ್ಪಟ್ಟಿದ್ದ, ದಾಸ್ಯ, ದೈನ್ಯಕ್ಕೆ ದೂಡಲ್ಪಟ್ಟಿದ್ದ ಸಮುದಾಯಗಳಿಗೆ ಅಕ್ಷರ ಜ್ಞಾನ ಬೆಳಕಾಗಿ, ಜೀವ ಪರವಾದ ದೃಷ್ಟಿಕೋನವಾಗಿ, ವಂಚಕ ವ್ಯವಸ್ಥೆಯ ವಿರುದ್ಧವಾದ ಪ್ರತಿಭಟನೆಯ ಅಸ್ತ್ರವಾಗಿ ಬಳಸಿಕೊಳ್ಳಲಾಯಿತು. ಇದರ ಫಲವೇ ದಲಿತ- ಬಂಡಾಯ ಚಳುವಳಿಗಳು. 1970ರ ಕಾಲಘಟ್ಟ ಕರ್ನಾಟಕದ ಮಟ್ಟಿಗೆ ಹೊಸ ಅಲೆಯನ್ನು ಹುಟ್ಟು ಹಾಕಿದ ಕಾಲ. ದಲಿತ-ಬಂಡಾಯ ಸಾಹಿತ್ಯ ಪ್ರಖರವಾಗಿ ಬೆಳೆದು ನಿಂತ ಕಾಲ. ಯುವ ಜನತೆಯಲ್ಲಿ ಅದರಲ್ಲೂ ಮುಖ್ಯವಾಗಿ ತಳ ಸಮುದಾಯಗಳ ಯುವಕರಲ್ಲಿ ಹೊಸ ಹೊಸ ವಿಚಾರಧಾರೆಗಳನ್ನು ಹುಟ್ಟು ಹಾಕಿದ, ಹೊಸ ಹೊಸ ಬಾಗಿಲುಗಳನ್ನು ತೆರೆದ ಕಾಲಘಟ್ಟ. ಅಂಬೇಡ್ಕರ್‌ವಾದ, ಲೋಹಿಯಾವಾದ, ಮಾರ್ಕ್ಸ್‌ವಾದಗಳ ಕಡೆಗೆ ಮುಖಮಾಡಿ ನಿಲ್ಲಿಸಿದ ಕಾಲಘಟ್ಟ. ಕಾಲದಿಂದ ಕಾಲಕ್ಕೆ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳು ಹೇಗೋ ಹಾಗೆಯೇ ಸಾಹಿತ್ಯಕ ಬದಲಾವಣೆಗಳನ್ನು ನಾವು ಸಾಹಿತ್ಯ ಚರಿತ್ರೆಯುದ್ದಕ್ಕೂ ಕಾಣಬಹುದು. ಈ ಹಿನ್ನಲೆಯಲ್ಲಿ ನವ್ಯ ಸಾಹಿತ್ಯವನ್ನು ಹಿಂದಿಕ್ಕಿ ಮುಂಚೂಣಿಗೆ ಬಂದ ಹೊಸಗನ್ನಡ ಸಾಹಿತ್ಯ ಪ್ರಕಾರವೇ ಈ ದಲಿತ ಸಾಹಿತ್ಯ.

ಶತ ಶತಮಾನಗಳಿಂದ ಅಸ್ಪೃಶ್ಯರು, ತಬ್ಬಲಿ ಸಮುದಾಯಗಳು ತಾವು ಅನುಭವಿಸಿದ ನೋವು, ಸಂಕಟ, ಸ್ವಾತಂತ್ರ್ಯ ಹರಣ, ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ ಈ ಎಲ್ಲವುಗಳನ್ನು ಕಂಡು-ಉಂಡು, ರೋಸಿ ಬೇಸತ್ತ ಜನರಿಗೆ ವೇದಿಕೆಯಾಗಿ, ಧ್ವನಿಯಾಗಿ ನಿಂತ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಾಹಿತ್ಯ ಇವುಗಳ ಮೂಲಕ ತಮ್ಮ ಸಿಟ್ಟು ಸೆಡವು, ಆಕ್ರೋಶ, ಅಸಹಾಯಕತೆಯನ್ನು ದಾಖಲು ಮಾಡಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಶೋಷಿತ, ದಮನ, ದರ್ಪ-ದೌರ್ಜನ್ಯ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಆದಿಯಲ್ಲಿ ದನಿಯಾಗಿ ನಿಂತದ್ದು ದಲಿತ ಸಂಘರ್ಷ ಸಮಿತಿ. ಇದರ ಮೂಲಕವೇ ಸಾಕಷ್ಟು ಜನ ಸಾಹಿತಿಗಳು, ಹೋರಾಟಗಾರರು, ಹಾಡುಗಾರರು, ಸಂಘಟಿತರಾಗಿ ತಮ್ಮ ಆವೇಶ, ಸಿಟ್ಟು, ಆಕ್ರೋಶಗಳನ್ನು ಅಭಿವ್ಯಕಿಸಿರುವುದು ಕಂಡು ಬರುತ್ತದೆ. ಸಾಹಿತಿಗಳು ತಮ್ಮ ಮೊನಚುಳ್ಳ ಬರಹಗಳ ಮೂಲಕ ಅಭಿವ್ಯಕ್ತಿಸಿದರೆ, ಹಾಡುಗಾರರು ತಮ್ಮ ಅಭಿವ್ಯಕ್ತಿಯನ್ನು ಬಂಡಾಯದ ರೂಪದ ಹಾಡಿನ ಮೂಲಕ, ಹಾಗೆಯೇ ಹೋರಾಟಗಾರರು ಚಳುವಳಿಗಳ ಮೂಲಕ ತಮ್ಮ ಹರಿತವಾದ ಭಾಷಣಗಳು, ಉಪನ್ಯಾಸಗಳನ್ನು ಬಹಿರಂಗ ಸಭೆ ಸಮಾರಂಭಗಳ ಮುಖೇನ ದಾಖಲು ಮಾಡಿರುವುದನ್ನು ನಾವು ಕಾಣಬಹುದು.

ದಲಿತ ಸಂಘರ್ಷ ಸಮಿತಿಯ ವತಿಯಿಂದ ಅತಿ ಹೆಚ್ಚಿನ ಕಾರ್ಯಕರ್ತರು, ಹೋರಾಟಗಾರರು, ಸಾಹಿತಿಗಳನ್ನು ಮತ್ತು ಹಾಡುಗಾರರನ್ನು ರಾಜ್ಯಕ್ಕೆ ನೀಡಿದ ಕೀರ್ತಿ ಕೋಲಾರ ಜಿಲ್ಲೆಗೆ ಸಲ್ಲುತ್ತದೆ ಎಂದರೆ ತಪ್ಪಾಗಲಾರದು. ಡಿ.ಎಂ. ತಿಮ್ಮರಾಯಪ್ಪ, ಸಿ.ಎಂ.ಮುನಿಯಪ್ಪ, ಎನ್.ವೆಂಕಟೇಶ್, ಶಿವಣ್ಣ, ಎನ್.ಮುನಿಸ್ವಾಮಿ, ಕೆ.ರಾಮಯ್ಯ, ಎಂ.ವೆಂಕಟಸ್ವಾಮಿ, ಗಂಗಾರಾಂ ಚಂಡಾಳ, ವಿ.ಮುನಿವೆಂಕಟಪ್ಪ, ಪಿಚ್ಚಳ್ಳಿ ಶ್ರೀನಿವಾಸ್, ಕೆ.ನಾರಾಯಣಸ್ವಾಮಿ ಮುಂತಾದವರನ್ನು ಕಾಣಬಹುದು.

1973ರಲ್ಲಿ ಅಂದಿನ ಕರ್ನಾಟಕ ಸರ್ಕಾರದ ಪೌರಾಡಳಿತ ಸಚಿವರಾಗಿದ್ದ ಬಿ.ಬಸವ ಲಿಂಗಪ್ಪನವರು ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಕುರಿತು ದಲಿತ ಯುವಕರಲ್ಲಿ ಹರಿಯ ಬಿಡುವ ಮೂಲಕ ಅಂದಿನ ಕನ್ನಡ ಸಾಹಿತ್ಯವನ್ನು ಉದ್ದೇಶಿಸಿ "ಕನ್ನಡ ಸಾಹಿತ್ಯದಲ್ಲಿ ಬೂಸಾತನವು ಸೇರಿದೆ. ಕನ್ನಡದ ಬರಹಗಾರರು ಬರೆದಿದ್ದೆಲ್ಲ ಗಟ್ಟಿ ಸಾಹಿತ್ಯವಲ್ಲ" ಎಂಬ ಹೇಳಿಕೆ ನೀಡಿದ್ದರ ಫಲ. ಮಾರನೆಯ ದಿನ ಪತ್ರಿಕೆಗಳಲ್ಲಿ ಮಂತ್ರಿ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಸಾಹಿತ್ಯ ಎಂದು ಲೇವಡಿ ಮಾಡಿದ್ದಾರೆ ಎಂದು ವರದಿಯಾಗಿ ಪ್ರತಿಭಟನೆಯನ್ನು ಹುಟ್ಟಿ ಹಾಕಿತು. ಇದರ ಫಲವಾಗಿ ಬಸವಲಿಂಗಪ್ಪನವರು ಮಂತ್ರಿ ಪದವಿ ಕಳೆದುಕೊಳ್ಳಬೇಕಾಯಿತು. ಇದರ ತರುವಾಯ ಹುಟ್ಟಿ ಬಂದಿದ್ದೇ ದಲಿತ ಸಂಘರ್ಷ ಸಮಿತಿ. ಅಂಬೇಡ್ಕರ್ ವಿಚಾರಧಾರೆ, ಜೆ.ಪಿ.ಚಳುವಳಿ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ, ಆಂಧ್ರದ ದಿಗಂಬರ ಕವಿತಾ ಎಂದು ಕರೆಯಲ್ಪಡುವ ಚಳುವಳಿಗಳಿಂದ ಪ್ರಭಾವಿತರಾದ ಕೆಲವು ದಲಿತ ವಿದ್ಯಾವಂತ ಯುವಕರು ಸೇರಿ ಪ್ರೊ.ಬಿ.ಕೃಷ್ಣಪ್ಪನವರ ಮಾರ್ಗದರ್ಶನದಲ್ಲಿ ಭದ್ರಾವತಿಯಲ್ಲಿ 1974ರಲ್ಲಿ ದಲಿತ ಸಂಘರ್ಷ ಸಮಿತಿಯನ್ನು (ಟಿ. ರಾಜಣ್ಣ, ಎನ್.ಟಿ.ರಾಜು, ಈರಯ್ಯ, ಎನ್.ಗಿರಿಯಪ್ಪ, ಬೋರಯ್ಯ ಮುಂತಾದವರು) ಹುಟ್ಟು ಹಾಕಿದರು.

ಕನ್ನಡದ ದಲಿತ ಸಾಹಿತ್ಯದ ಮೇಲೆ ಪ್ರಭಾವ ಬೀರಿದವರೆಂದರೆ ಛತ್ರಪತಿ ಸಾಹು ಮಹಾರಾಜ್, ಮಹಾತ್ಮ ಜ್ಯೋತಿ ಬಾಫುಲೆ, ನಾರಾಯಣ ಗುರು, ಮಹಾತ್ಮಾ ಗುರು ರಂಗರಾವ್, ರಾಮಸ್ವಾಮಿ ಪೆರಿಯಾರ್, ಬಾಬಾ ಸಾಹೇಬ್ ಅಂಬೇಡ್ಕರ್ ಇವರುಗಳ ವಿಚಾರಧಾರೆಗಳು, ಲೋಹಿಯಾವಾದ, ಮಾರ್ಕ್ಸ್‌ವಾದ ಕನ್ನಡ ದಲಿತ ಸಾಹಿತ್ಯದ ಮೇಲೆ ಹೆಚ್ಚಿನ ಪ್ರಭಾವ ಮತ್ತು ಪ್ರೇರೇಪಣೆ ನೀಡಿರುವುದನ್ನು ಕಾಣಬಹುದು.

ದಲ ಎಂಬುದು ಸಂಸ್ಕೃತ ಪದ. ದಲ ಎಂದರೆ ಗುಂಪು, ಸೈನ್ಯ, ಶೋಷಿತ, ದಮನಕ್ಕೆ ಒಳಗಾದವರು ಎಂಬ ಅರ್ಥಸ್ಥಿತಿಗಳನ್ನು ನಮ್ಮ ಶಬ್ದಕೋಶ, ನಿಘಂಟುಗಳು ತಿಳಿಸುತ್ತವೆ. "ದಲಿತ" ಎಂದರೆ ಸೀಳಲ್ಪಟ್ಟವರು, ಶೋಷಿಸಲ್ಪಟ್ಟವರು,

* ಸಹಾಯಕ ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು (ಸ್ವಾಯತ್ತ), ಜಯನಗರ, ಬೆಂಗಳೂರು – 560 070. papugbp@yahoo.co.in, ಮೊಬೈಲ್ ಸಂಖ್ಯೆ: 9731457008




ISBN 978-81-933447-7-4

9 788193 344774